ಪ್ರಬಂಧ

# ಲಂಡನ್ನಿನಲ್ಲೊಬ್ಬ ಬಾಡಿಗೆ ಕವಿ



**ಎಸ್. ದಿವಾಕರ್**

ಲಂಡನ್ನಿನಲ್ಲಿ ಬಿಸಿಲು ಕಾಣದ, ಬಿಟ್ಟೂ ಬಿಟ್ಟೂ ಮಳೆ ಸುರಿಯುತ್ತಿದ್ದ ಒಂದು ಮಧ್ಯಾಹ್ನ. ಗ್ಲೋಬ್ ಥಿಯೇಟರಿನಲ್ಲಿ ಶೇಕ್ಸ್‌ಪಿಯರನ 'ಕಾಮೆಡಿ ಆಫ್ ಎರರ್ಸ್' ನಾಟಕ ನೋಡಿಕೊಂಡು ಹೊರಬಂದ ನಾನು ಮತ್ತು ಜಯಶ್ರೀ, ಮಿತ್ರರಾದ ಯೋಗೀಂದ್ರ ಮರವಂತೆ ಮತ್ತು ದೀಪಕ್ ಬಂಗಾರಪೇಟೆ ಅವರ ಜೊತೆ ರಸ್ತೆಗಿಳಿದಿದ್ದೆವು.

ಶೇಕ್ಸ್‌ಪಿಯರ್ ಅಸಂಖ್ಯ ಮಂದಿಯ ಯೋಚನೆಗಳನ್ನು, ಭಾವನೆಗಳನ್ನು, ಅನುಭವಗಳನ್ನು ಗ್ರಹಿಸಿದ ಮಹಾನುಭಾವ. ಮನುಷ್ಯಾನುಭವವನ್ನು ಅವನ ಹಾಗೆ ಸಮಗ್ರವಾಗಿ ಪಡಿಮೂಡಿಸಿದವರು ಬೇರೆ ಯಾರಿದ್ದಾರು? ಅವನು ಅದನ್ನು ಸಾಧಿಸಿದ್ದು ಭಾಷೆಯಿಂದ; ಭಾಷೆಯ ಮೇಲೆ ಅವನಿಗಿದ್ದ ಪ್ರಭುತ್ವದಿಂದ. 'ಹ್ಯಾಮ್ಲೆಟ್' ನಾಟಕದಲ್ಲಾಗಲೀ 'ಕಿಂಗ್ ಲಿಯರ್' ನಾಟಕದಲ್ಲಾಗಲೀ ಎಂಥ ಗಾಢ ಅನುಭವ ಹರಳುಗಟ್ಟಿದೆಯೆಂದರೆ ಓದುವಾಗ ಅಥವಾ ನೋಡುವಾಗ ಅವುಗಳಲ್ಲಿರುವುದು ಬರೀ ಮಾತುಗಳಷ್ಟೆ ಎಂಬುದನ್ನು ನಾವು ಮರೆತುಬಿಡುತ್ತೇವಲ್ಲ. ಮಾತುಗಳ ಮೂಲಕ ನಿಜವೆನ್ನಿಸುವ ಅನುಭವವನ್ನು ಸೃಷ್ಟಿಸುವುದೇ ಕವಿಯ ಕೆಲಸ. ಶೇಕ್ಸ್‌ಪಿಯರ್ ಇಡೀ ಮಾನವಕುಲವನ್ನು ಪ್ರತಿನಿಧಿಸಿದ್ದು ಮಾತುಗಳ ಮೂಲಕವೇ ಅಲ್ಲವೆ?

ನಾನು ಹೀಗೆಲ್ಲ ಯೋಚಿಸುತ್ತಿದ್ದಾಗ ಹತ್ತಿರದಲ್ಲೆಲ್ಲಾದರೂ ಹೋಟಲಿದೆಯೇ ಎಂದು ಹುಡುಕುತ್ತಿದ್ದರು ಗೆಳೆಯರು. ಕೆಲವೇ ಕ್ಷಣಗಳ ನಂತರ ಯೋಗೀಂದ್ರರ ಜೊತೆ ಮುಂದೆ ಮುಂದೆ ಹೋಗುತ್ತಿದ್ದ ನನ್ನನ್ನು ತಡೆದು 'ಇಲ್ಲಿ ನೋಡಿ' ಎಂದರು ದೀಪಕ್.

ರಸ್ತೆಯ ಒಂದು ಬದಿಯಲ್ಲಿ ಒಬ್ಬ ಒಂದು ಸಣ್ಣ ಸ್ಟೂಲಿನ ಮೇಲೆ ಕೂತಿದ್ದ: ತಿಳಿನೀಲಿ ಬಣ್ಣದ ಜೀನ್ಸ್, ಕಡುಗಪ್ಪು ಬಣ್ಣದ ಕೋಟು. ತಲೆಗೆ ಫ್ಲ್ಯಾಟ್ ಕ್ಯಾಪು. ಕಣ್ಣಿಗೆ ಚಿನ್ನದ ಫ್ರೇಮಿದ್ದ ಕನ್ನಡಕ. ಅವನು ಪುಟ್ಟದೊಂದು ಟೇಬಲಿನ ಮೇಲಿದ್ದ ಟೈಪ್‌ರೈಟರಿನಲ್ಲಿ ಎರಡೂ ಕೈಯಿಗಳ ತೋರುಬೆರಳುಗಳಿಂದ ಟೈಪು ಮಾಡುತ್ತಿದ್ದ. ಅವನ ಎಡ ಪಕ್ಕದಲ್ಲಿ ಬಾಯಿ ತೆರೆದುಕೊಂಡ ಒಂದು ಬ್ಯಾಕ್‌ಪ್ಯಾಕ್ ಇತ್ತು.

ನೋಡಿದರೆ ಸುಮಾರು ನಲವತ್ತರ ಪ್ರಾಯ. ಬಹುಮಟ್ಟಿಗೆ ಪ್ರಸಿದ್ಧ ಲೇಖಕ ಇ.ಎಂ. ಫಾರ್ಸ್ಟರ್ ನಡುವಯಸ್ಸಿನಲ್ಲಿ ಕಾಣುತ್ತಿದ್ದಂತೆ ಕಾಣುತ್ತಿದ್ದ ಆತ ಸ್ವಲ್ಪ ಹೊತ್ತಿನ ಮೊದಲು ನಾವು ನೋಡಿದ್ದ ನಾಟಕದ ಒಂದು ಪಾತ್ರದಂತೆಯೂ ಕಂಡದ್ದು ಆಕಸ್ಮಿಕವಾಗಿರಲಿಕ್ಕಿಲ್ಲ.

ಅವನ ಟೈಪ್‌ರೈಟರಿನ ಅಡಿಯಿಂದ ಕೆಳಗೆ ತೂಗುಬಿದ್ದಿತ್ತು ಪೋಸ್ಟರಿನಂಥ ಒಂದು ತಿಳಿಹಸಿರು